# ಆಹಾ ಸುದ್ದಿ!

★ ಸಸಿತೋಟ



ಬೆಲ್ಜಿಯಂನ 86ರ ಅಜ್ಜಿ ಕ್ಯಾಥರಿನ್ ಬ್ಲೋಮೆನ್ 20 ಸಾವಿರಕ್ಕೂ ಅಧಿಕ ಆಟಿಕೆಗಳನ್ನು ಸಂಗ್ರಹಿಸಿದ್ದಾಳೆ. ಕಳೆದ 65 ವರ್ಷಗಳಿಂದ ಈ ಸಂಗ್ರಹದ ಹುಚ್ಚು ಅಂಟಿಸಿಕೊಂಡಿದ್ದಾಳಂತೆ. ಆಟಿಕೆ ಖರೀದಿಸಲು ಕ್ಯಾಥಿ ಅಜ್ಜಿ ತನ್ನ ಮೊಮ್ಮಕ್ಕಳು, ಮರಿಮಕ್ಕಳ ಜೊತೆ ಕಿತ್ತಾಡುವುದನ್ನು ಕಂಡು ಯಾರನ್ನು ಸುಧಾರಿಸಬೇಕು ಎಂದು ತಿಳಿಯದೆ ಮಕ್ಕಳು ಗೋಳಾಡುತ್ತಿರಬಹುದು.

ಜಪಾನಿನ ಪಟ್ಟಣವೊಂದರಲ್ಲಿ ಡ್ರೈವಿಂಗ್ ಲೈಸನ್ಸ್ ವಾಪಸ್ಸು ಮಾಡುವ ಹಿರಿಯ ಚಾಲಕರಿಗೆ ಅವರ ಅಂತ್ಯ ಸಂಸ್ಕಾರದ ಶುಲ್ಕದಲ್ಲಿ ಶೇ. 15ರಷ್ಟು ರಿಯಾಯ್ತಿ ನೀಡುವುದಾಗಿ ಅಲ್ಲಿಯ ಪೊಲೀಸ್ ಇಲಾಖೆ ಹಾಗೂ ಅಂತಿಮ ಸಂಸ್ಕಾರ ನಿರ್ವಹಿಸುವ ಸಂಸ್ಥೆ ಆಮಿಷ ತೋರಿಸಿವೆಯಂತೆ. ಕಳೆದ ವರ್ಷ ಸಂಭವಿಸಿದ ವಾಹನ ಅಪಘಾತದ ಸಾವಿನ ಸಂದರ್ಭದಲ್ಲಿ ಅಪಘಾತ ಮಾಡಿದವರು ಶೇ 13ರಷ್ಟು ಈ ಹಿರಿಯ ಚಾಲಕರೆ ಅಂತೆ. 75 ವರ್ಷಕ್ಕಿಂತ ಮೇಲಿನವರಿಗೆ ಮಾತ್ರ ಈ ಆಮಿಷ. ರಿಯಾಯ್ತಿಗಾದರೂ ಈ ಹಿರಿಯ ಚಾಲಕರು ತಮ್ಮ ಅಂತ್ಯ ಸಂಸ್ಕಾರವನ್ನು ಮುಂದೂಡಲಿ ಎಂಬುದು ಅವರ ಉದ್ದೇಶವಿರಬಹುದು.

ಸೂರತ್‌ನಲ್ಲಿ ಒಂದೇ ಸ್ಥಳದಲ್ಲಿ 2000ಕ್ಕೂ ಅಧಿಕ ಜನ ಕಸ ಹೊಡೆದು ಗಿನ್ನೆಸ್ ದಾಖಲೆ ಸ್ಥಾಪಿಸಿದರಂತೆ. ಒಂದೇ ಸ್ಥಳದಲ್ಲಿ ಗುಡಿಸಲು ಕಸ ಎಷ್ಟಿತ್ತು ಮಾರಾಯ್ರೆ!



ಅಮೆರಿಕದಲ್ಲಿ ಮಹಿಳೆಯೊಬ್ಬಳ ಕರುಳಿನಿಂದ ಅಣಬೆಯನ್ನು ಶಸ್ತ್ರಚಿಕಿತ್ಸೆ ಮೂಲಕ ಹೊರ ತೆಗೆಯಲಾಯ್ತಂತೆ. ಅಣಬೆ ಒಳಗೊಳಗೇ 7 ಸೆಂ.ಮೀ. ಉದ್ದ ಬೆಳೆದು ಮಹಿಳೆಯ ಕರುಳನ್ನೇ ತೋಟ ಮಾಡಿಕೊಳ್ಳಲು ಹೊರಟಿತ್ತಂತೆ. ಮಹಿಳೆ ಒಣ ಅಣಬೆಯನ್ನು ಅಗಿಯದೇ ಹಾಗೇ ನುಂಗಿದ್ದೇ ಇದಕ್ಕೆ ಕಾರಣವಂತೆ. 21ನೆ ಶತಮಾನದಲ್ಲಿ ಕರುಳೂ ಟೂ–ಇನ್–ಒನ್ ಆಗಲು ಹೊರಟಿದೆ.



ಆಸ್ಟ್ರೇಲಿಯಾದಲ್ಲಿ ಇತ್ತೀಚೆಗೆ ನಡೆದ ದೇಸಿ ಪ್ಯಾರಾಷೂಟ್ ಸ್ಪರ್ಧೆಯಲ್ಲಿ ಅಲ್ಲಿಯ ನಟ ಸ್ಯಾಮ್ಯುಯೆಲ್ ಜಾನ್ಸನ್ ನೂರಾರು ಕಂಚುಕಗಳಿಂದ ತಯಾರಿಸಿದ ಪ್ಯಾರಾಷೂಟ್‌ನಲ್ಲಿ 13 ಅಡಿ ಎತ್ತರದಿಂದ ಕೆಳಗೆ ಜಿಗಿದು ಕೊನೆಯ ಕ್ಷಣದಲ್ಲಿ ನೀರಿಗೆ ಬಿದ್ದರಂತೆ. ಈ 'ಬ್ರಾ'ಷೂಟ್ ಎಷ್ಟು ಭಾರ ಎಂಬುದು ಬಿದ್ದ ನಂತರ ಜಾನ್ಸನ್‌ಗೆ ಗೊತ್ತಾಯ್ತಂತೆ.



ನಿಮ್ಮ ಬಳಿ 1.5 ದಶಲಕ್ಷ ಡಾಲರ್ ಇದೆಯಾ? ಹಾಗಿದ್ದರೆ ಅಮೆರಿಕಾದ ಈ 'ರಿಡಕ್ಷನ್' ಎಂಬ ಪಟ್ಟಣವೇ ನಿಮ್ಮದಾಗಬಹುದು. 70 ವರ್ಷಗಳ ಹಿಂದೆ ಚಿಂದಿ ಸಂಸ್ಕರಣ ಘಟಕವಿದ್ದ ಈ ಪಟ್ಟಣದಲ್ಲಿ ಸದ್ಯ 60 ಮಂದಿ ಮಾತ್ರ ವಾಸವಿದ್ದಾರಂತೆ. ಚಿತ್ರದಲ್ಲಿರುವ ಡೇವಿಡ್ ಸ್ಟೇವಿಯೇ ಮಾಲೀಕ. ನೂರಾರು ಶೆಡ್‌ಗಳಷ್ಟೇ ಉಳಿದಿರುವ ಈ ಪಟ್ಟಣದ ಖರೀದಿಯಿಂದ ಬೇರೇನೂ ಲಾಭವಿಲ್ಲದಿದ್ದರೂ ನಿಮ್ಮ ಬ್ಯಾಂಕ್ ಬ್ಯಾಲನ್ಸ್‌ನಲ್ಲಂತೂ ರಿಡಕ್ಷನ್ ಆಗುವುದು ಖಂಡಿತ.